JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ರತ್ನಾಕರ ವರ್ಣಿ ಯ ' ರತ್ನಾಕರ ಶತಕ ' -- ಒಂದು ವಿಹಂಗಮ ನೋಟ.

**ಡಾ. ಮಂಜುನಾಥ ಎಂ. ಎಂ**
ಕನ್ನಡ ಸಹ ಪ್ರಾಧ್ಯಾಪಕ
ಸ.ಪ್ರ.ದ.ಮ.ಕಾಲೇಜು, ಶಿವಮೊಗ್ಗ

*Abstract :* **ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿದ ಜೈನ ಕವಿಗಳಲ್ಲಿ ರತ್ನಾಕರವರ್ಣಿಯವರು ಪ್ರಮುಖರು. ಈ ಪ್ರಬಂಧವು ಅವರ ಪ್ರಮುಖ ಕೃತಿಗಳಲ್ಲಿ ಒಂದಾದ 'ರತ್ನಾಕರ ಶತಕ'ವನ್ನು ಕುರಿತು ವಿಹಂಗಮ ನೋಟವನ್ನು ನೀಡುತ್ತದೆ. ಕಾವ್ಯ, ಅಧ್ಯಾತ್ಮ, ಮತ್ತು ವೈರಾಗ್ಯಗಳನ್ನು ಒಳಗೊಂಡಿರುವ ಈ ಕೃತಿಯು ಆತ್ಮ ಸಾಕ್ಷಾತ್ಕಾರ, ಮೋಕ್ಷ ಸಾಧನೆ, ಮತ್ತು ಬಾಹ್ಯ ಸೌಂದರ್ಯಕ್ಕಿಂತ ಆಂತರಿಕ ಸೌಂದರ್ಯಕ್ಕೆ ಒತ್ತು ನೀಡುವ ಕುರಿತು ವಿವರಿಸುತ್ತದೆ. ಈ ಶತಕದಲ್ಲಿ ಮಾನವನ ಜೀವನದ ವಾಸ್ತವಗಳು, ನಶ್ವರವಾದ ದೇಹ ಮತ್ತು ಅಮರವಾದ ಆತ್ಮದ ನಡುವಿನ ವ್ಯತ್ಯಾಸ, ಹಾಗೂ ಭಕ್ತಿ ಮತ್ತು ಕರುಣೆಯ ಮಹತ್ವವನ್ನು ಕವಿ ಅತ್ಯಂತ ಆಕರ್ಷಕವಾಗಿ ನಿರೂಪಿಸಿದ್ದಾರೆ. 'ರತ್ನಾಕರ ಶತಕ'ವು ಕನ್ನಡ ಸಾಹಿತ್ಯದಲ್ಲಿ ಒಂದು ಉತ್ತಮ ಕೃತಿರತ್ನವಾಗಿ ಬೆಳಗುತ್ತದೆ.**

*Keywords* : **ರತ್ನಾಕರ ವರ್ಣಿ, ರತ್ನಾಕರ ಶತಕ , ಜೈನ ಸಾಹಿತ್ಯ ,ಕನ್ನಡ ಕಾವ್ಯ, ಅಧ್ಯಾತ್ಮ ತತ್ವಗಳು**

ವಿಚಾರಗಳು ಗಾಳಿಯಲ್ಲಿ ತೂರಿಹೋಗಬಾರದು, ಅವು ಜನಮನದಲ್ಲಿ ಶಾಶ್ವತವಾಗಿ ಉಳಿಯಬೇಕಾದರೆ ಕೃತಿಯಾಗಬೇಕು. ಅದಕ್ಕೆಂದೇ ಕವಿ ರಾಘವಾಂಕ ' ಜನ ಬದುಕಬೇಕೆಂದು ಕಾವ್ಯವನ್ನು ಬರೆದೆ ' ಎಂದಿದ್ದಾನೆ ಕಾವ್ಯ ದಿಂದ ಜನ ಜೀವಿಸುವ ರೀತಿ ಎಂಥದ್ದು ಎಂಬುದನ್ನು ಕನ್ನಡ ಸಾಹಿತ್ಯ ಪರಂಪರೆಯು ಈಗಾಗಲೇ ಅದನ್ನು ವಿವರಿಸಿದೆ. ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಅನುಪಮ ಕೊಡುಗೆ ನೀಡಿದ ಶ್ರೇ ಯಸ್ಸು ಜೈನ ಕವಿಗಳಿಗೆ ಸಲ್ಲುತ್ತದೆ. ಅದಕ್ಕೆಂದೇ ಕನ್ನಡ ವಿಶ್ವ ವಿದ್ಯಾಲಯವು ' ಜೈನ ಸಾಹಿತ್ಯ ಸಂಸ್ಕೃತಿ ಅಧ್ಯಯನ ಕೇಂದ್ರವನ್ನು ' ಸ್ಥಾಪಿಸಿ ಅದರ ಮೂಲಕ ಜೈನ ಕಾವ್ಯ ಮಾಲೆಯನ್ನು ಆರಂಭಿಸಿ ಪ್ರಾಚೀನ ಕವಿಗಳ ಜೀವನ ಮತ್ತು ಕೃತಿಗಳ ಕುರಿತು ಜನ ಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಕೃತಿ ಗಳನ್ನು ರಚಿಸಿ ಪ್ರಕಟಿಸುತ್ತಿರುವುದು ಜೈನ ಕವಿಗಳಿಗೆ ಸಲ್ಲಿಸುವ ಗೌರವವಾಗಿದೆ ಅಲ್ಲದೆ ಅದು ಅವರ ಪ್ರಸಿದ್ಧಿಗೆ ಹಿಡಿದ ಕೈಗನ್ನಡಿಯಾಗಿದೆ. ಹಾಗೆಯೇ ಮಂಗಳೂರು ವಿಶ್ವವಿದ್ಯಾ ನಿಲಯದ ರತ್ನಾಕರವರ್ಣಿ ಅಧ್ಯಯನ ಪೀಠದ ಮೂಲಕ ಪ್ರಚಾರೋಪ ನ್ಯಾಸ ಮತ್ತು ಕೃತಿಗಳ ಪ್ರಕಟಣೆ ನಿರಂತರವಾಗಿ ನಡೆದು ಬರುತ್ತಿರುವುದನ್ನು ಈ ಸಂದರ್ಭದಲ್ಲಿ ಗಮನಿಸಬಹುದು

ಕನ್ನಡ ಸಾಹಿತ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ದೀರ್ಘವಾದ ಇತಿಹಾಸವಿದೆ. ಅದರಲ್ಲೂ ಜೈನ ಕವಿಗಳಾದ ಪಂಪ, ಪೊನ್ನ, ರನ್ನ, ಜನ್ನ, ನಾಗಚಂದ್ರ ಮುಂತಾದ ವರು ಪಡೆದಿರುವ ಪ್ರಸಿದ್ಧಿ ಅನನ್ಯವಾದುದು. ಹಾಗೆಯೇ ಹದಿನಾರನೆಯ ಶತಮಾನದ ಲ್ಲಿದ್ದ ರತ್ನಾಕರವರ್ಣಿಗೂ ಕೂಡ ಕನ್ನಡ ಸಾಹಿತ್ಯ ಚರಿತ್ರೆಯ ಪುಟಗಳಲ್ಲಿ ಒಂದು ವಿಶಿಷ್ಟವಾದ ಸ್ಥಾನವಿರುವುದನ್ನು
ಗಮನಿಸಬಹುದು.ಮಲ್ಲಿಕಾ ಘಂಟಿ ಯವರು ಹೇಳುವಂತೆ ' ಸಾಂಗತ್ಯದ ಮೇರು ಶಿಖರ ' ವಾದ ರತ್ನಾಕರವರ್ಣಿ ಪಂಡಿತ ಪಾಮರರಿಬ್ಬರಿಗೂ ಹೊಂದಿಕೊಳ್ಳುವಂತಹ ಮತ್ತು ಪ್ರಿಯನಾದ ಕವಿ ಎನಿಸಿದ್ದಾನೆ.ಜೈನ ಧರ್ಮದ ಮೇಲಿನ ಭಕ್ತಿ ಮತ್ತು ಅಭಿಮಾನದಿಂದಾಗಿ ಜೈನ ಕಥಾವಸ್ತುವನ್ನು ಆಯ್ದುಕೊಂಡು ' ಭರತೇಶ ವೈಭವ ' ಎಂಬ ಸಾಂಗತ್ಯ ಕಾವ್ಯವನ್ನು ಬಹಳ ಸೊಗಸಾಗಿ ರಚಿಸಿ ಎಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದಾನೆ.ಇದು ಜೈನರಲ್ಲದವರಿಗೂ ಕೂಡ ಇಷ್ಟವಾದ ಕೃತಿಯಾಗಿದೆ.ರತ್ನಾಕರನ

ಕಾವ್ಯ ಸೌಂದರ್ಯ ವಿಶಿಷ್ಟವಾದದ್ದು ಮತ್ತು ಅತಿ ಆಕರ್ಷಕವಾದದ್ದು. ಕವಿ ರತ್ನಾಕರ ಸಾಂಗತ್ಯ ಕಾವ್ಯವಲ್ಲದೆ ಶತಕಗಳನ್ನು ರಚಿಸುವುದರಲ್ಲೂ ಸೈ ಎನಿಸಿಕೊಂಡಿದ್ದಾನೆ. ಈತ ರಚಿಸಿರುವ ಶತಕಗಳೆಂದರೆ,

೧.ರತ್ನಾಕರ ಶತಕ.

೨. ಅಪರಾಜಿತೇ ಶ್ವರ ಶತಕ

೩.ತ್ರಿಲೋಕ ಶತಕ.

ಈತ ತ್ರಿಲೋಕ ಶತಕದ ಕೊನೆಯ ಪದ್ಯದ ಲ್ಲಿ ತನಗೆ ರತ್ನಾಕರ, ರತ್ನಾಕರ ಸಿದ್ಧ, ರತ್ನಾಕರ ವರ್ಣಿ ಮುಂತಾದ ಹೆಸರುಗಳಿರುವುದಾಗಿ, ತನ್ನದು ತುಳುನಾಡು, ಕ್ಷತ್ರಿಯ ವಂಶ , ಚಾರುಕೀರ್ತಿ ದೀ ಕ್ಷಾ ಗುರು, ಹಾಗೂ ತಾನು ಕೇವಲ ನವ ಮಾಸಗಳಲ್ಲಿ ಸಾಂಗತ್ಯದ ಮೇರು ಕೃತಿ ' ಭರತೇಶ ವೈಭವ ' ಬರೆದಿರುವುದಾಗಿ ತಿಳಿಸಿದ್ದಾನೆ.

ರತ್ನಾಕರ ಚಿಕ್ಕವಯಸ್ಸಿನಲ್ಲಿ ವಿರಕ್ತನಾಗಿದ್ದು ಚಾರುಕೀರ್ತಿ ಗಳಿಂದ ದೀಕ್ಷೆ ಪಡೆದು ಯೋಗದಲ್ಲಿ ನಿರತನಾಗಿದ್ದ,ಈತನ ಉಪದೇಶಕ್ಕೆ ಜನ ಮಾರು ಹೋಗಿದ್ದರು.ಈತನ ಪ್ರಸಿದ್ಧಿಯನ್ನು ಕಂಡು ಸಹಿಸಲಾರದ ಕೆಲವು ಹೀನ ಮನಸ್ಸಿನ ಕುಹ ಕಿಗಳು ಈತನ ಮಂಚದ ಕೆಳಗೆ ಒಬ್ಬಳು ವೇಶ್ಯೆಯ ನ್ನು ಬಚ್ಚಿಟ್ಟು, ಉಪದೇಶದ ಸಮಯದಲ್ಲಿ ವೇಶ್ಯೆಯ ನ್ನ ಹೊರಗೆಳೆದು ರತ್ನಾಕರನನ್ನು ಎಲ್ಲರೆದುರು ಅಪಮಾನಿಸಿದರು. ಇದರಿಂದ ಬೇಸರಗೊಂಡ ರತ್ನಾಕರ ಇಂಥವರ ಸಹವಾಸವೇ ತನಗೆ ಬೇಡವೆಂದು ಜೈನ ಧರ್ಮವನ್ನು ತ್ಯಜಿಸಿದನು.

ಒಂದು ದಿನ ಒಂದು ಶೈವ ಗ್ರಂಥವನ್ನು ಆನೆಯ ಮೇಲೆ ಮೆರವಣಿಗೆ ಮಾಡುತ್ತಿರುವುದನ್ನು ಕಂಡು ಅದರಲ್ಲಿ ರಸವೇ ಇಲ್ಲವೆಂದು ಪ್ರತಿಪಾದಿಸಿ ಒಂಭತ್ತು ತಿಂಗಳಲ್ಲೇ ಒಂದು ರಸಮಯ ವಾದ ಕಾವ್ಯಕೃತಿ ಯೊಂದನ್ನು ರಚಿಸಿದನು. ಅದೇ ,' ಭರತೇಶ ವೈಭವ ' ವೆಂದು,ಅರಸನು. ರತ್ನಾಕರನ ಪಾಂಡಿತ್ಯ ಪೂರ್ಣ ಪ್ರತಿಭೆಗೆ ಮತ್ತು ಯೋಗ ಸಾಮರ್ಥ್ಯಕ್ಕೆ ಮನಸಾರೆ ಮೆಚ್ಚಿ ಆತನನ್ನು ವೀರ ಶೈವ ಮತಕ್ಕೆ ಸೇರಿಸಿ ದನು, ಆದರೆ ಮರಣ ಕಾಲದಲ್ಲಿ ತಾನು ಆಂತರ್ಯದಲ್ಲಿ ನಿಜವಾಗಿ ಜೈನನೇ ಆಗಿದ್ದೇನೆ, ತನ್ನ ಅಂತ್ಯಕ್ರಿಯೆ ಗಳು ಜೈನ ಸಂಪ್ರದಾಯದಂತೆ ನಡೆಯಬೇಕೆಂಬ ಅಪೇಕ್ಷೆ ವ್ಯಕ್ತ ಪಡಿಸಿ ನಿಧನನಾದನೆಂಬ ಪ್ರತೀತಿ ಇದೆ.

ರತ್ನಾಕರನು ಭೈರವ ಅರಸನ ಮಗಳೊಡನೆ ಪ್ರೇಮ ಸಂಬಂಧ ಹೊಂದಿದ್ದ ನೆಂದೂ, ರಾಜ ಅದನ್ನು ಒಪ್ಪದೇ ಅವನನ್ನು ಬಂಧಿಸಲು ಆದೇಶ ನೀಡಿದಾಗ ರತ್ನಾಕರ ತಪ್ಪಿಸಿಕೊಂಡು ವ್ರತಧಾರಿಯಾಗಿತ್ತಾನೆ, ಜೈನ ಶ್ರಾವಕ ರ ಮನೆಯಲ್ಲಿ ಭಿಕ್ಷೆ ದೊರೆಯದಿದ್ದಾಗ ಕೋಪಗೊಂಡು ವೀರಶೈವ ಧರ್ಮಕ್ಕೆ ಮತಾಂತರ ಹೊಂದಿದನೆಂದು, ಕೆಲವು ಕಾಲದ ನಂತರ ಕೋಪ ಶಾಂತವಾಗಿ ರತ್ನಾಕರ ಶತಕ, ಅಪರಾಜಿತೇಶ್ವರ ಶತಕ ,ತ್ರಿಲೋಕ ಶತಕಗಳನ್ನು, ೨೦೦೦ ಆಧ್ಯಾತ್ಮ ಗೀತೆಗಳನ್ನು ರಚಿಸಿರುವ ವಿಚಾರ ದೇವಚಂದ್ರ ' ರಾಜಾವಳಿ ಕಥೆ ' ಯಲ್ಲಿ ಉಲ್ಲೇಖಗೊಂಡಿದೆ.

ಶತಕಗಳ ಕುರಿತು:-

೧.ರತ್ನಾಕರ ಶತಕದಲ್ಲಿ ಒಟ್ಟು ೧೨೮ ಪದ್ಯಗಳಿವೆ.ಜೀವರುಗಳಿಗೆ ಆತ್ಮಸ್ವರೂಪ ದ ಪರಿಚಯ, ಮೋಕ್ಷ ಸಾಧನೆಯ ಮಾರ್ಗದರ್ಶನ ನೀಡಲಾಗಿದೆ.

೨. ಅಪರಾಜಿ ತೇ ಶ್ವರ ಶತಕದಲ್ಲಿ ಒಟ್ಟು ೧೨೮ ಪದ್ಯ ಗಳಿದ್ದು, ಜೈನ ಧಾರ್ಮಿಕ ತತ್ತ್ವ ಗಳನ್ನ ಕುರಿತು ವಿವೇಚಿಸಲಾಗಿದೆ.

೩.ತ್ರಿಲೋಕ ಶತಕದಲ್ಲಿ ಲೋಕದ ಸ್ವರೂಪ, ವಿಂಗಡನೆ, ವಿವಿಧ ಕ್ಷೇತ್ರಗಳ ಪರಿಮಾಣ ಮುಂತಾದವುಗಳ ಬಗ್ಗೆ ವಿವರಿಸಲಾಗಿದೆ..ಇವುಗಳೊಂದಿಗೆ ಸುಮಾರು ೨೦೦ ೦ ಕ್ಕಿಂತ ಹೆಚ್ಚು ಆಧ್ಯಾತ್ಮ ಗೀತೆಗಳನ್ನು ರಚಿಸಿರುವುದು ಕಂಡು ಬಂದಿದೆ.ಇವುಗಳಲ್ಲಿ ಭಕ್ತಿ, ನೀತಿಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ.

ರತ್ನಾಕರವರ್ಣಿ ವಿರಚಿತ ,'ರತ್ನಾಕರ ಶತಕ 'ದ ವಿಹಂಗಮ ನೋಟ.

ಇದರಲ್ಲಿ ಒಟ್ಟು ೧೨೮ ಪದ್ಯಗಳಿದ್ದು, ಇವು ಶಾರ್ದೂಲ ವಿಕ್ರೀಡಿತ ಮತ್ತು ಮತ್ತೇಭವಿಕ್ರೀಡಿತ ದಲ್ಲಿ ರಚಿತವಾಗಿವೆ.ಪ್ರತಿ ವೃತ್ತದ ಅಂತ್ಯದಲ್ಲಿ ' ರತ್ನಾಕರಾಧೀಶ್ವರ ' ಎಂಬ ಅಂಕಿತ ವಿದೆ. ರತ್ನಾಕರ ಎಂಬ ಶಬ್ದಕ್ಕೆ ರತ್ನಕ್ಕೆ ಆಕರವಾದವನು ಅಂದರೆ ರತ್ನ ತ್ರಯಗಳಾದಂತಹ ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ,ಸಮ್ಯಕ್ ಚಾರಿತ್ರ್ಯ ಗಳಿಗೆ ಆಧಾರ ವಾದವನು,ಆಶ್ರಯದಾತ ಎಂಬ ಅರ್ಥಗಳಿವೆ.ಕವಿಯು ರತ್ನಾಕರಾಧೀಶ್ವರನನ್ನು ಸಂಬೋಧಿಸಿ ತನ್ನ ಚಿಂತನೆ, ಪ್ರಾರ್ಥನೆ, ಅನುಭವಗಳನ್ನು ಅರ್ಪಿಸಿಕೊಂಡಿರುವ ವಿಧಾನದಲ್ಲಿ ದೆ.

ಮೊದಲಿಗೆ ರತ್ನ ತ್ರಯದ ಸ್ವರೂಪವನ್ನು ಈ ರೀತಿ ಹೇಳಿದ್ದಾನೆ.

ತತ್ತ್ವ ಪ್ರೀತಿ ಮನಕ್ಕೆ ಪುಟ್ಟ ಲದು ಸಮ್ಯ ಗ್ದರ್ಶನಂ ಮತ್ತಮಾ,
ತತ್ವಾರ್ಥಂಗಳನೊಲ್ದು ಭೇದಿಸುವುದು ಸಮ್ಯಗ್ಞಜ್ಞನಮಾ ಬೋಧದಿ,
ಸತ್ವಂಗಳ್ಗೆ ಡದಂತು ಟೋವಿ ನಡೆಯಲ್ಸ ಮ್ಯ ಕ್ಚರಿತ್ರಂ ಸುರ,
ತ್ನ ತ್ವಂ ಮೂರಿ ವು ಮುಕ್ತಿಗೆಂದರು ಪಿ ದೈ! ರತ್ನಾಕರಾಧೀಶರಾ !

ಎಂದರೆ ತತ್ವಗಳ ಕುರಿತು ಪ್ರೀತಿ ಹುಟ್ಟುವುದೇ ಸಮ್ಯಕ್ ದರ್ಶನ, ಆ ತತ್ವಾರ್ಥಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸಿ ಅವುಗಳ ತಿಳುವಳಿಕೆ ಪಡೆವುದು ಸಮ್ಯಕ್ ಜ್ಞಾನ, ಪಡೆದ ಜ್ಞಾನದಿಂದ ಜೀವಿಗಳಿಗೆ ಹಿಂಸೆಯಾಗದಂತೆ ವರ್ತಿಸುವುದು ಸಮ್ಯಕ್ ಚಾರಿತ್ಯ. ಮುಕ್ತಿಗೆ ಈ ರತ್ನತ್ರಯಗಳೇ ಕಾರಣ ಎಂದಿದ್ದಾನೆ.

ಹಾಗೆಯೇ ಆತ್ಮ ಮತ್ತು ದೇಹಗಳು ಒಂದೇ ಅಲ್ಲ, ಅವು ಬೇರೆ ಬೇರೆ ಎಂಬುದನ್ನ ಸರಳವಾಗಿ ಹಲವಾರು ನಿದರ್ಶನಗಳನ್ನು , ಹೋಲಿಕೆಗಳನ್ನು ನೀಡಿ ಸ್ಪಷ್ಟಪಡಿಸಿದ್ದಾನೆ.

ಅರಿವಿಂದೀಕ್ಷಿ ಸಲಕ್ಕು ಮಾತ್ಮನಿ ರವಂ ದೇಹಂ ಬೋಲೀ ಕಣ್ಗೆ ತಾಂ,
ಗುರಿಯಾಗಂ ಶಿತಿಯೊಳ್ಸುವರ್ಣ ಮರ ಲೊ ಳ್ ಸೌರಭ್ಯ ಮಾಕ್ಷೀರ ರದೊಳ್,
ನರು ನೆಯ್ಯಾಷ್ಮದೊಳಗ್ನಿಯಿರ್ಪ ತೆರದಿಂದೀ ಮೆಯ್ಯೊಳೊಂದಿರ್ಪ ನೆಂ,
ದರಿದ ಭ್ಯಾಸಿಸೆ ಕಾಣ್ಬುಮೆಂದರು ಪಿ ದೈ! ರತ್ನಾಕರಾಧೀಶ್ವರಾ!

ಎಂದರೆ, ಆತ್ಮವನ್ನು ಹೊರಗಣ್ಣಿನಿಂದ ಕಾಣಲು ಸಾಧ್ಯವಿಲ್ಲ. ಜ್ಞಾನದ ಕಣ್ಣುಗಳಿ ಮಾತ್ರ ವೀಕ್ಷಿಸಲು ಸಾಧ್ಯ. ಹೇಗೆಂದರೆ. ಕಲ್ಲೊಳಗಿನ ಸ್ವರ್ಣದಂತೆ. ಹೂವಿನಲ್ಲಿರುವ ಸುವಾಸನೆಯಂತೆ, ಕ್ಷೀರದೊಳಗಿನ ತುಪ್ಪದಂತೆ, ಮರದೊಳಗಿರುವ ಬೆಂಕಿಯಂತೆ ಆತ್ಮ ಇರುವುದೆಂಬುದನ್ನು ಅರಿತು ಅಭ್ಯಾಸ ಮಾಡಿದರೆ (ಧ್ಯಾನ ಮಾಡಿದರೆ) ಕಾಣುವುದು ಎಂದಿದ್ದಾನೆ. ಅಂದರೆ ಬಹಿರಂಗದ ಕಣ್ಣಿಗೆ ಕಾಣದ ಆತ್ಮನನ್ನು ಅಂತರಂಗದ ಅದರಲ್ಲೂ ಜ್ಞಾನ ಚಕ್ಷುಗಳಿಂದ ಕಾಣಬಹುದೆಂಬ ಸತ್ಯ ವನ್ನು ಹೇಳಿದ್ದಾನೆ.
ಹಾಗೆಯೇ ಮುಂದುವರಿದು ದೇಹದ ಅಲಂಕಾರಕ್ಕೆ ಬಳಸಲಾಗುವ ಬೆಲೆ ಬಾಳುವ ಆಭರಣಗಳು ಕ್ಷಣಿಕ ಎಂಬುದನ್ನು ಸಾರಿದ್ದಾನೆ.

ಶ್ರೀರಾಗಂ ಸಿರಿಗಂಪು ಮಾಲೆ ಮಣಿ ಹಾರಂ ವಸ್ತ್ರ ಮಂಗಕ್ಕಳಂ,
ಕಾರಂ ಹೇಯ ಮಿವಾತ್ಮತತ್ತ್ವ ರುಚಿ ಬೋಧೋದ್ಯಚ್ಚರಿತ್ರಂಗಳೀ,
ತ್ರೈರತ್ನಂ ಮನಸಿಂಗೆ ಸಿಂಗರ ಮುಪಾ ದೇಯಂಗಳೆಂದಿತ್ತೆ ಶ್ರಂ,
ಗಾರ ಶ್ರೀ ಕವಿ ಹಂಸರಾಜನೊಡೆಯಾರತ್ನಾಕರಾಧೀಶ್ವರಾ.....

ನಮ್ಮ ದೇಹದ ಅಲಂಕಾರಕ್ಕಾಗಿ ಬಳಸಲಾಗುವ ಭೌತಿಕ ವಸ್ತುಗಳಾದ ಮುತ್ತು, ರತ್ನ, ಚಿನ್ನ, ಸುಗಂಧ , ಪುಷ್ಪಇವೆಲ್ಲವೂ ಹೇಯವಾದವುಗಳು. ಅಲ್ಲದೇ ಇವು ಕ್ಷಣಿಕವಾದವುಗಳು. ಆದ್ದರಿಂದ ಇವುಗಳನ್ನು ತ್ಯಜಿಸಿ ಬಿಡುವುದೇ ಉತ್ತಮ. ಬಹಿರಂಗ ಸೌಂದರ್ಯಕ್ಕೆ ಒತ್ತು ನೀಡುವುದನ್ನು ಬಿಟ್ಟು ಅಂತರಂಗದ ಸೌಂದರ್ಯಕ್ಕೆ ಆದ್ಯತೆ ನೀಡಬೇಕು. ಅಂದರೆ ಬಾಹ್ಯ ಚೆಲುವಿಕೆಗೆ

ದಾಸರಾಗದೇ ತ್ರಿರತ್ನಗಳ ಸ್ವೀಕಾರ ಮಾಡಿ ದೇಹವನ್ನು ಸಾರ್ಥಕ ಪಡಿಸಿಕೊಳ್ಳುವುದು ಯೋಗ್ಯವಾದುದು ಎಂಬುದು ಕವಿಯ ಇಂಗಿತ.

ಹುಟ್ಟು ಸಾವು ಅನಿವಾರ್ಯ, ಅದಕ್ಕೆ ಭಯ ಪಡುವ ಅಥವಾ ಬೀಗುವ ಅಗತ್ಯವಿಲ್ಲ ಎಂಬುದನ್ನು ಕವಿ ಹೀಗೆ ತಿಳಿಸಿದ್ದಾನೆ.

ಸಾವಿಗಂಜಲದೇಕೆ ಸಾವು ಪೆರತೇ ಮೆಯ್ಯಾ ಳ್ದಿ ದರ್ಗಂಜಲಾ,

ಸಾವೇಂ ಮಾಣ್ಬು ಮೆ ಕಾವರುಂಟೆಯಕಟಾ ಈ ಜೀವ ನೇನೆಂದು ವುಂ,

ಸಾವಂ ಕಂಡವನಲ್ಲವೇ ಮರಣವಾಗಲ್ಕುಂದ ದೇಂ ಪುಟ್ಟ ನೇ,

ನೀವೆನ್ನೊಳ್ಳಿ ಲೆ ಸಾವುದುಂ ಸುಖವಲ್ತೆ! ರತ್ನಾಕರಾಧೀಶ್ವರಾ!

ಎಂದರೆ, ಹುಟ್ಟಿದ ಪ್ರತಿಯೊಂದು ಜೀವಿಯೂ ಸಾಯಲೇ ಬೇಕು ಸಾವು ನಿಶ್ಚಿತವಾಗಿರುವಾಗ ಸಾವಿಗೆ ಹೆದರುವುದೇಕೆ? ಸಾವನ್ನು ತಡೆಯುವುದು ಅಸಾಧ್ಯ. ಜೀವಿ ಸತ್ತ ನಂತರ ಮತ್ತೊಂದು ರೂಪದಲ್ಲಿ ಜನ್ಮ ತಾಳಿ ಬರುತ್ತದೆ. ಆತ್ಮ ಎಂಬುದು ಅಮರ. ದೇಹವೆಂಬುದು ಕ್ಷಣಿಕ. ಪರಮಾತ್ಮ ನೀ ನನ್ನ ಅಂತರಂಗದಲ್ಲಿ ನೆಲೆಸಿದರೆ ಸಾವು ಕೂಡ ಸುಖವಾಗುತ್ತದೆ ಎಂಬುದನ್ನು ರತ್ನಾಕರವರ್ಣಿ ಹೇಳುವುದರ ಮೂಲಕ ಹುಟ್ಟನ್ನು ನಗುತ್ತ ಸ್ವಾಗತಿಸುವಂತೆ ಸಾವನ್ನು ಆನಂದದಿಂದ ಸ್ವಾಗತಿಸಬೇಕು ಎಂದು ಪ್ರತಿಪಾದಿಸಿದ್ದಾನೆ.

ತಾಯಿ ತಂದೆಯನ್ನು ಅತಿಯಾಗಿ ಪ್ರೀತಿಸಿ ಅಳುತ್ತಾ ಸಾಯುತ್ತಾನೆ. ಬೇರೆ ಇನ್ನೊಬ್ಬರ ಶರೀರವನ್ನು ಹೊಕ್ಕು ಹುಟ್ಟುತ್ತಾನೆ. ಬಳಿಕ ಅವರುಗಳನ್ನು ತಂದೆ ತಾಯಿ ಎಂದು ಅಪ್ಪಿಕೊಂಡು ಸಂತಸ ಪಡುವುದು. ಹಿಂದಿನ ಜನ್ಮದಲ್ಲಿ ತನ್ನನ್ನು ಪಡೆದ ತಂದೆ ತಾಯಿಯರ ನೆನಪೇ ಇರುವುದಿಲ್ಲ ಎಂದ ಮೇಲೆ ಆತ್ಮನಿಗೂ ಇದೇನು ಮಾಯೆಯಿಂದುಂಟಾದ ಭ್ರಮೆ ಯೋ ಅಯ್ಯೋ! ಏನು ಹೇಳುವುದೆಂದು ಕವಿ ಜಿನನಲ್ಲಿ ಕೇಳುತ್ತಿದ್ದಾನೆ.

ಭವಭವಗಳಲ್ಲೂ ಯಾವುದೇ ಪುಣ್ಯಕಾರ್ಯಗಳನ್ನು ಮಾಡದೆ ಭೋಗೋಪಭೋಗಗಳಿಗೆ, ಸೌಂದರ್ಯಕ್ಕೆ ಸೊಬಗಿಗೆ, ಆಭರಣಾದಿಗಳಿಗೆ ಸಂತಸ ಮಯನಾದ : ವಾತಾವರಣಕ್ಕೆ, ಯೌವನಕ್ಕೆ, ಐಶ್ವರ್ ಕ್ಕೆ ಹಂಬಲಿಸಿ, ಸಂಸಾರವೆಂಬ ಕಾನನದಲ್ಲಿ ಸಿಲುಕಿ ಏಕೆ ಚಿಂತೆ ಪಡುವುದು, ಬದಲಾಗಿ ಮುಂದಿನ ಭವದಲ್ಲಾದರೂ ಪುಣ್ಯದ ಬುತ್ತಿಯನ್ನು ಕಟ್ಟಿಕೊಳ್ಳುವ ಪ್ರಯತ್ನ ಮಾಡಬೇಕೆಂದು ಕವಿ ಸೂಚಿಸಿದ್ದಾನೆ,

ಅಂತೆಯೇ ಮಾನವನ ಉದರ ಪೋಷಣೆಗೆ ಸಿಹಿ ,ಕಾರ, ಉಪ್ಪು. ಹುಳಿ, ಕಹಿ ಇವೆಲ್ಲವೂ ಬೇಕೇ ಬೇಕು. ಪ್ರತಿಯೊಂದರಲ್ಲೂ ಒಂದೊಂದು ರುಚಿಯಿದೆ. ನಾಲಿಗೆ ಚಪಲ ಮಯವಾದುದು. ಅದಕ್ಕೆ ಸಿಹಿಯೂ ಬೇಕು ಹಾಗೆ ಕಾರವೂ ಬೇಕು. ಸಂಸಾರ ಬಂಧನದಲ್ಲಿರುವವರು ಬದುಕಿನ ಏರಿಳಿತಗಳಿಗೆ ಒಗ್ಗಿಕೊಂಡು ಸಾಮರಸ್ಯದ ಜೀವನ ನಡೆಸಬೇಕು ಏನು ಬಂದರೂ , ಎದುರಾದರೂ ಭೀತರಾಗದೇ ಎಲ್ಲವನ್ನೂ ದಿಟ್ಟತನದಿಂದ ಎದುರಿಸಿ ಬೆಳ ಬೇಕು ಅವನೇ ನಿಜವಾದ ಧೈರ್ಯಶಾಲಿ ಎಂಬುದು ಕವಿಯ ಅಭಿಮತ.

ಕೊಟ್ಟವರಿಂದ ದಾನ ಪಡೆದಾಕ್ಷಣ ಯಾರೂ ಕೂಡ ಸಿರಿವಂತರಾಗುವುದಿಲ್ಲ. ಇದಕ್ಕೆ ನಾವು ಮಾಡಿದ ಪಾಪ ಪುಣ್ಯದ ಕಾರ್ಯಗಳೇ ಕಾರಣವಾಗುತ್ತವೆ. ದುರ್ಯೋಧನನು ಕರ್ಣನಿಗೆ ಬೇಕಾದುದನ್ನು ನೀಡುತ್ತಿದ್ದ. ಆದರೆ ಪಾಂಡವರಿಗೆ ದಾಯಾದಿ ಮಾತ್ಸರ್ಯದಿಂದ ಕೂಡ ಬೇಕಾದುದನ್ನು ಕೊಡದೆ ವಂಚಿಸಿದ. ಅಂತ್ಯದಲ್ಲಿ ಕರ್ಣ ತನ್ನಲ್ಲಿದ್ದುದನೆಲ್ಲಾ ದಾನ ಮಾಡಿ ಅತೀ ಬಡವನೆನಿಸಿಕೊಂಡ . ಪಾಂಡವರು ಭೂಮಿಯ ಒಡೆಯಾದರು. ಸಿರಿ ವಂತರಾದರು. ಅಂದರೆ ದುರ್ಯೋಧನ ಪಾಂಡವರಿಗೆ ಕೂಡದಿರುವುದು ಶುಭ ವಾಯಿತು. ಕರ್ಣನಿಗೆ ನೀಡಿದ್ದು ಅಶುಭವಾಯಿತು.

ಏನೇ ಸುಖವಿರಲಿ ಕಷ್ಟವಿರಲಿ ಜಿನನನ್ನು ಮರೆಯದೇ ಸ್ಮರಿಸುತ್ತಿರಬೇಕು. ಪ್ರತಿಯೊಬ್ಬರೂ ನಡೆಯುವಾಗ 'ಎಡವಿ ಬಿದ್ದಾಗ . ಎದ್ದಾಗ . ನುಡಿಯುವಾಗ . ಭಯ ಪಟ್ಟಾಗ ,ಸುಖದಲ್ಲಿರುವಾಗ ಅರ್ಹತ್ ಪರಮೇಶ್ವರ, ಸಿದ್ದ ಶಂಕರ , ಸಮುದ್ರಾಧೀಶ್ವರ ಕಾಪಾಡು ಎಂದು ನಿರಂತರವಾಗಿ ಬೇಡುವವನೇ ಪರಮ ಸುಖಿ ಎಂದು ಕವಿ ತಿಳಿಸಿದ್ದಾನೆ.

ಅಲ್ಲದೇ ಮನುಷ್ಯರ ಇಂದ್ರಿಯಗಳು ಆತನ ಎಲ್ಲ ರೀತಿಯ ಚಟುವಟಿಕೆಗಳಿಗೆ ಕಾರಣ. ಚೆಲುವೆಯರು ಎಲ್ಲೇ ಓಡಾಡಿದರೂ ಕಣ್ಣುಗಳು ಅತ್ತ ಕಡೆಯೇ ಸುಳಿಯುತ್ತವೆ. ಯಾವ ಯಾವ ಕಡೆಗೆ ಕಾಮಿನಿಯರು ಮೊಗವನ್ನು ತಿರುಗಿಸುವರೋ ಅತ್ತ ಕಡೆಗೆ . ಜಿಹ್ವೆಯು ಚಾಚುತ್ತದೆ. ಯಾವ ಕಡೆ ಮಿಂಡಿಯರು ಹೋದರೂ ಅತ್ತ ಕಡೆಗೆ ಬುದ್ದಿಯೂ ಹೋಗುತ್ತದೆ. ಈ ಸುಳಿದಾಡುವ ಮನವನ್ನು ಜಿನೇಂದ್ರನ ಕಡೆಗೆ ಹರಿಯ ಬಿಡಲು ಸಾಧ್ಯವಾಗುತ್ತಿಲ್ಲ. ನಿಜವಾಗಿ ನಾನು ಕೆಟ್ಟೆನು. ಮನವನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಏನು ಮಾಡಬೇಕೆಂದು ದಿಕ್ಕು ತೋಚುತ್ತಿಲ್ಲ ಕಾಪಾಡು ಜಿನೇಂದ್ರ ಎಂದು ಕವಿಎಲ್ಲರ ಪ್ರತಿನಿಧಿಯಾಗಿ ಪ್ರಾರ್ಥಿಸಿದ್ದಾನೆ.

ದರ್ಶನ ಜ್ಞಾನವೇ ಶರೀರವಾಗಿರುವ ಶುದ್ಧಾತ್ಮನನ್ನು ನೋಡು, ಸ್ತ್ರೀಯ ಶರೀರವು ತನ್ನನ್ನು ಆಲಿಂಗಿಸಿದೊಡನೆ ಕಣ್ಣುಗಳನ್ನು ಕಟ್ಟಿ, ಶ್ರೇಷ್ಠವಾದ ಜ್ಞಾನವನ್ನು ಹೋಗಲಾಡಿಸಿ ಮೂರ್ಚೆಯನ್ನು ಹೊಂದಿಸಿ ಹೆಣದ ಹಾಗೆ ಮಾಡುವುದು. ಇದೊಂದು ಉಗ್ರವಾದುದು. ಈ ಶರೀರಕ್ಕೆ ಸಂತೋಷವು ಹೆಚ್ಚಾಗುತ್ತಿರಲು ಮುಗ್ಧರಿಸುವನು. ಇದು ನಿಜಕ್ಕೂ ಮುರ್ಖ ತನ ಎಂದು ಕವಿ ವಿಷಾದಿಸಿದ್ದಾನೆ .

ಹಾಗೆಯೇ ಮುಂದುವರಿದು ಬೇರೆ ಯವರನ್ನು ಟೀಕಿಸಿದರೆ ನೊಂದುಕೊಳ್ಳುತ್ತಾರೆ ಎಂದು ಕವಿ ತನ್ನನ್ನು ತಾನೇ ಟೀಕೆ ಮಾಡಿಕೊಳ್ಳುವೆ ಎಂದು ಆತ್ಮವಿಮರ್ಶೆ ಮಾಡಿಕೊಳ್ಳುತ್ತಾನೆ. ಮಾನಿನಿಯ ಮೂತ್ರದ ಪ್ರವಾಹದಿಂದ ಕೂಡಿರುವ ಶರೀರವನ್ನು ಲತೆ ಯೆಂದೂ. ಮಾಂಸದ ಮುದ್ದೆಯಾದ ಕುಚಗಳನ್ನು ಬಂಗಾರದ ಕಮಲವೆಂದು, ರಕ್ತ ತುಂಬಿದ ತುಟಿಯನ್ನು ಅಮೃತ ರುಚಿಯುಳ್ಳು ದೆಂದೂ ತಾನು ಬಿದ್ದದ್ದು ಸಾಲದೆ ಬೇರೆಯವರನ್ನು ಬೀಳಿಸಿದೆನಲ್ಲಾ ನಿಜವಾಗಿ ತಾನು ಕವಿಯೋ ಕಪಿ ಯೋ ಎಂದು ಪ್ರಶ್ನಿಸಿಕೊಂಡಿದ್ದಾನೆ.

ರಾಜನು ತನ್ನನ್ನು ತನ್ನ ಸೇವಕರು ಹೇಗೆ ಭಕ್ತಿ ಗೌರವ ಅಭಿಮಾನದಿಂದ ಕಾಣರೋ ಹಾಗೆಯೇ ಭಗವಂತನನ್ನ ಕಾಣಬೇಕು. ಭಯ ಭಕ್ತಿ, ಗೌರವದಿಂದ ಕೈ ಮುಗಿಯುತ ಶಿರಸಾ ಸ್ಟಾಂಗ ನಮಸ್ಕಾರ ಮಾಡಿ ' ಸ್ತುತಿಸಿ, ನಂಬಿಕೆ ವಿಶ್ವಾಸವಿಟ್ಟು ಶರಣಾದರೆ ಶತ್ರುರಾಜರು ಕೂಡ ತನಗೆ ಒಲಿಯುತ್ತಾರೆ. ಮಿತ್ರರಾಗುತ್ತಾರೆ ಅಂದರೆ ಪ್ರತಿಯೊಬ್ಬರೂ ತನಗಿಂತ ಕಿರಿಯರಿಲ್ಲ ಭಗ ವಂತನಿಗಿಂತ ಹಿರಿಯರಿಲ್ಲ ಎಂಬ ವಿನೀತ ಭಾವದಿಂದ ನಡೆದುಕೊಂಡಾಗ ಎಲ್ಲರೂ ನಮ್ಮ ಬಂಧುಗಳು ಇಲ್ಲವೇ ಮಿತ್ರರಾಗುವರು ಎಂದು ಕವಿ ತಿಳಿಸಿದ್ದಾನೆ

ರಾಜನಾದ ವನು ಸನ್ಮಾರ್ಗದಲ್ಲಿ ನಡೆಯಬೇಕು ಆತನ ಪ್ರಜೆಗಳೂ ಕೂಡ ಅದೇ ಮಾರ್ಗದಲ್ಲಿ ನಡೆದು ಕೃತಾರ್ಥರಾಗುತ್ತಾರೆ. ರಾಜ ದುರ್ಮಾರ್ಗದಲ್ಲಿ ನಡೆದರೆ ಆ ಪ್ರಜೆಗಳು ಅದೇ ಮಾರ್ಗ ಹಿಡಿದು ರಾಜನಂತೆ ನರಕಕ್ಕೆ ಗುರಿಯಾಗುತ್ತಾರೆ. ಹಾಗಾಗಿ ರಾಜನಾದವನು ಮೊದಲು ನಿರ್ಮಲ ಧರ್ಮದ ಹಾದಿ ಹಿಡಿಯಬೇಕು ಆಗ ಪ್ರಜೆಗಳು ಅದೇ ಪಥದಲ್ಲಿ ಸಾಗಿ ಸರ್ವರ ಬಾಳು ಒಳಿತಾಗಿ . ಉದ್ಧಾರವೂ ಸಾಧ್ಯ. ರಕ್ಷಕರು ಭಕ್ಷರಾಗಬಾರದು.. ಆದ್ದರಿಂದ ರಾಜ ಉನ್ನತ ಮಾರ್ಗದ ಮೂಲಕ ತನ್ನ ಹಾಗೂ ಪ್ರಜೆಗಳ ಉದ್ಧಾರಕ್ಕೆ ಕಾರಣಕರ್ತನಾಗಬೇಕೆಂದು ಕವಿ ಉರ್ವಿ ಪತಿಗೆ ಕರೆ ನೀಡಿದ್ದಾನೆ.

ಮನುಷ್ಯ ತನಗೆ ಎಷ್ಟೇ ಸಂಪತ್ತು ಪ್ರಾಪ್ತಿಯಾದರೂ ತಾನು ತಾನಾಗಿರಬೇಕು . ಆದರೆ ಐಸಿರಿ ಅಹಂಕಾರದಿಂದ ಬೀಗಿದರೆ ಅವನ ಉದ್ಧಾರವಾಗದೇ ಕೆಡುಕೇ ಸಂಭವಿಸುವುದು. ಸಂಪತ್ತು ಹೆಚ್ಚಾದಂತೆ ಅದನ್ನು ಒಳ್ಳೆಯ ಕಾರಕ್ಕೆ ವಿನಿಯೋಗಿಸಬೇಕು. ಅರ್ಹರಿಗೆ ಅದು ಸಲ್ಲಿಕೆಯಾಗಬೇಕು. ಉತ್ತಮ ವ್ರತಗಳನ್ನು ಮಾಡಬೇಕು. ಸರ್ವ ಸಂಗ ಪರಿ ತ್ಯಾಗಿಗಳಾದ ಮೂಲ ಶ್ರೇಷ್ಠರನ್ನು ಗೌರವಿಸಿ ಸಂತೃಪ್ತಿಪಡಿಸಬೇಕು. ಧಾರ್ಮಿಕ ಜನಕ್ಕೆ ಆಧಾರವಾಗಬೇಕು. ಅವರ ಧರ್ಮ ಕಾರ್ಯಕ್ಕೆ ಪ್ರೋತ್ಸಾಹ ನೀಡಿದರೆ ಸುಕೃತವೆಂಬುದು ಪ್ರಾಪ್ತವಾಗುತ್ತದೆ ಎಂಬುದು ರತ್ನಾಕರನ ಅಭಿಪ್ರಾಯ. ಸಿರಿ ಎಂಬುದು ಕ್ಷಣಿಕ ಅದು ಹೆಚ್ಚಾದಂತೆ ಮನುಷ್ಯನ ದುರಾಸೆಯೂ ಹೆಚ್ಚಿ ಮದಾಂಧನಾಗುವನು. ಅದು ಸದ್ಬಳಕೆಯಾಗಲು ಅದನ್ನು ಅರ್ಹರಿಗೆ ಹಂಚಾಟ ಗುಣವನ್ನು ಬೆಳೆಸಿಕೊಳ್ಳಬೇಕು. ಪುರಂದರ ದಾಸರು ಹೇಳುವಂತೆ. "ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆಯಬೇಕು. ". ಆಗ ಆತ ಮೋಕ್ಷಕ್ಕೆ ಹತ್ತಿರವಾಗುತ್ತಾನೆ.

ರಾಜನಾದವನು ಭೂಕಂಪ. ಬರ ಗ್ರಹಗಳ ಕಾಟ, ದೇವತೆಗಳ ಭೀತಿ. ರೋಗ , ದುಃಖ, ಹೀನಸ್ಥಿತಿ.. ಎದುರಾದಾಗ.. ಆನೆ ಕುದುರೆ' ಗೋವುಗಳಿಗೆ ಸಂಬಂಧಿಸಿದ ರೋಗ, ಬಂದಾಗ, ದುಃಸ್ವಪ್ನ ಹೀಗೆ ನಾನಾ ರೀತಿಯ ಕಷ್ಟ ಕಾರ್ಪಣ್ಯಗಳಿಗೆ ಪರಿಹಾರ ಕಂಡುಕೊಳ್ಳಲು ಜನ ಸಮೂಹದೊಂದಿಗೆ ಬೆರೆತು ಮಹಾ ಅಭಿಷೇಕ ಪೂಜೆ' ಕಲಿ ಕುಂಡಾದಿಯಾದ ಆರಾಧನೆಯನ್ನು ಮಾಡಬೇಕು ಇದು ಶಾಂತಿ ಸ್ಥಾಪನೆಗೆ ಪೂರಕ ಎಂಬುದು ಕವಿಯ ಅಂಬೋಣ.

ಮನುಷ್ಯ ಹುಟ್ಟುವಾಗ ಏನನ್ನು ತರಲಿಲ್ಲ, ಸತ್ತ ಮೇಲೆ ಏನನ್ನು ಒಯ್ಯುವುದಿಲ್ಲ.. ಎಲ್ಲವೂ ನಶ್ವರ ವಾದವುಗಳು. ಕೈಹಿಡಿದ ಹೆಂಡತಿ ಮಕ್ಕಳು ಇವರಾರು ತನ್ನ ಜೊತೆ ಬರುವುದಿಲ್ಲ. ಜೀವನ ಎಂಬುದು ಒಂದು ಕನಸಿನ ಹಾಗೆ, ಪೂರ್ವಜನ್ಮದಲ್ಲಿ ನ ಪುಣ್ಯದಿಂದ ಈ ಜನ್ಮದಲ್ಲಿ ಫಲ ನೀಡಿ ಮಾಯವಾಗುತ್ತದೆ. ಜೀವವೆಂಬುದು ಒಂದು ವಿನೋದ ಗೋಷ್ಠಿಯಂತೆ. ಇದನ್ನು ತಿಳಿಯದ ಅಜ್ಞಾನಿಗಳು ಈ ಜೀವನ ಶಾಶ್ವತವೆಂಬ ಭ್ರಮೆಯಲ್ಲಿ ಬದುಕುತ್ತಿರುವುದು ವಿಪ ರ್ಯಾಸವೇ ಸರಿ ಎಂಬುದು ಕವಿಯ ಅಭಿಮತವಾಗಿದೆ.

ಗರುಡ ಮಂತ್ರದ ಉಚ್ಚಾರಣೆಯಿಂದ ವಿಷವು ನಾಶವಾಗುತ್ತದೆ. ಯಕ್ಷಿಣಿ ಮಂತ್ರದಿಂದ ಬಹುವಿದ್ಯೆಗಳು ಪ್ರಾಪ್ತವಾಗುವುವು. ಇಂಥ ಗರುಡ ದೇವತೆ, ಯಕ್ಷ ದೇವತೆಗಳಿಂದ ಪೂಜಿಸಲ್ಪಡುವ ಪಾದಕಮಲಗಳುಳ್ಳ ಗುರುವನ್ನ ನೆನೆದವರಿಗೆ ಯಾವ ಕಷ್ಟಗಳೂ ಇರುವುದಿಲ್ಲ, ಆದ್ದರಿಂದ ಯಾರು ಎಷ್ಟೇ ದೊಡ್ಡವರಾದ ರೂ ಕೂಡ ಎಲ್ಲರಿಂದ ಪೂಜಿಸಲ್ಪಡುವ ಪಾದಕಮಲಗಳುಳ್ಳ ಗುರುವನ್ನು ನೆನೆಯಬೇಕು ಆಗ ಅವನಿಗೆ ಯಾವ ಕಷ್ಟಗಳು ಇರುವುದಿಲ್ಲ. ಇಷ್ಟಾರ್ಥಗಳು ಫಲಿಸು ತ್ತವೆ ಎಂದು ಕವಿ ಹೇಳಿ. ದ್ದಾನೆ

ಕೊನೆಯ ಪದ್ಯದ ಬಗ್ಗೆ ಹೇಳುವುದಾದರೆ. ಶೃಂಗಾರ ಕವಿ ಹಂಸರಾಜನಾದ ರತ್ನಾಕರವರ್ಣಿಯಿಂದ ರಚಿತವಾದ ರತ್ನಾಕರ ಶತಕದಲ್ಲಿ ಒಳಹೊಕ್ಕು ನೋಡಿದರೆ ವೈರಾಗ್ಯವು ನೀತಿ ಪ್ರತಿಪಾದನೆ ಹಾಗೂ ಆತ್ಮ ತತ್ವದ ವಿಚಾರ ವು ರಾರಾಜಿಸುತ್ತಿರುವುವು ಎಂದು ಹೇಳಿ ಈ ಕೃತಿಯ ಮಹತ್ವವನ್ನ ಸಾರಿದ್ದಾನೆ.

ಹೀಗೆ ರತ್ನಾಕರವರ್ಣಿಯ ರತ್ನಾಕರ ಶತಕದಲ್ಲಿ ಆತ್ಮಧ್ಯಾನ, ಸುಕವಿಯ ಮಹತ್ವ' ಸಾರ್ಥಕತೆ. ಯಾವುದು ಶ್ರೇಷ್ಟವೆಂಬುದು. ಶಾಂತಿ, ಸಹನೆ ವಿನಯ, ಹಿತಮಿತವಾದ ಮಾತು 'ಮುಕ್ತಿಯ ಚಿಂತನೆ. ಆತ್ಮನ ಅರಿವು' ಭಾವಪೂಜೆಯ ಶ್ರೇಷ್ಟತೆ, ಭಕ್ತಿಯಿಂದ ಬಾಧೆ ಮುಕ್ತಗೊಳ್ಳುವುದನ್ನು ,' ಕ್ಷಮಾಗುಣದ ಸಂತೋಷ ಮುಂತಾದ ಸೇವಕರಿಂದ ಆದಿಯಾಗಿ ರಾಜನವರೆಗೂ ಎಲ್ಲರಿಗೂ ಅನ್ವಯವಾಗುವಂತಹ ಜೀವ ಮೋಕ್ಷಕ್ಕೆ ಸಲ್ಲುವ ಮಾರ್ಗವನ್ನು ಕವಿ ಆಕರ್ಷಕವಾಗಿ ಕಟ್ಟಿಕೊಟ್ಟಿದ್ದಾನೆ. ಹೀಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ರತ್ನಾಕರ ಶತಕ ಒಂದು ಉತ್ತಮ ಕೃತಿರತ್ನವಾಗಿ ಕಂಗೊಳಿಸಿದೆ.

ಆಧಾರ ಗುಂಥಗಳು

೧. ಭರತೇಶ ವೈಭವ .... (ಸಂಗ್ರಹ.) ಸಂ . ತ.ಸು ಶಾಮರಾಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು ೧೯೮೫.

೨. ರತ್ನಾಕರವರ್ಣಿ (ಸಂ) ವಿ.ಸೀತಾರಾಮಯ್ಯ . ಐಬಿ ಎಚ್ ಪ್ರಕಾಶನ. ಬೆಂಗಳೂರು ೧೯೮೪.

೩ . ರತ್ನಾಕರವರ್ಣಿ -ಕವಿ ಕಾವ್ಯ ವಿಚಾರ ವಿವಿಧ ಲೇಖಕರು... ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು. ೧೯೯೯.

೪. ರತ್ನಾಕರವರ್ಣಿ (ಸಂ) ಎಂ.ಜಿ. ಬಿರಾದಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ. ಹಂಪಿ ೨೦೦೬ -

೫ ರತ್ನಾಕರವರ್ಣಿ ಮತ್ತು ಅವನ ಕೃತಿಗಳು (ಸಂ) ಸಂ.ಎಸ್. ವಿ .ಸುಜಾತ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ. ಹಂಪಿ, ೨೦೧೭

೬. ರತ್ನಾಕರ ಶತಕ - ಡಾ.ಎಚ್.ಪಿ. ಮೋಹನ ಕುಮಾರ ಶಾಸ್ತ್ರಿ, - ಆಚಾರ್ಯವಿಷನ್ ಗುರುಕುಲ ಎಡು ಸರ್ವಿಸ್ (ರಿ) ಮೈಸೂರು - ೨೦೨೦.